ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ದೂರವಾಣಿ ಸಂಖ್ಯೆ: 23341615, 23562283, 29720300
e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ:ಕೆ2/ಸ.ವ್ಯ.ಊ.ಕಾ/ಸರಭರಾಜು/13 /2023-24 ದಿನಾಂಕ: 02.08.2023

## ದರಪಟ್ಟಿ ಆಹ್ವಾನ ಪತ್ರ

ವಿಷಯ:- ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಯಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಹಾಜರಾಗುವ ಸಂಪನ್ಮೂಲ ವ್ಯಕ್ತಿಗಳಿಗೆ ಒಂದು ವರ್ಷದ ಅವಧಿಗೆ ಮದ್ಯಾಹ್ನ ಲಘು ಉಪಹಾರ ಹಾಗೂ ಕಾಫಿ/ಟೀ ಸರಬರಾಜು ಮಾಡುವ ಸಂಬಂಧ ದರಪಟ್ಟಿ ಕರೆಯುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಕೆ.ಎಸ್.ಕ್ಯು.ಎ.ಎ.ಸಿ ವತಿಯಿಂದ ನಡೆಯುವ ಕಾರ್ಯಕ್ರಮಗಳಿಗೆ ಹಾಜರಾಗುವ ಸಂಪನ್ಮೂಲ ವ್ಯಕ್ತಿಗಳಿಗೆ ಒಂದು ವರ್ಷದ ಅವಧಿಗೆ ಮದ್ಯಾಹ್ನ ಲಘು ಉಪಹಾರ ಹಾಗೂ ಕಾಫಿ/ಟೀ ಸರಬರಾಜು ಮಾಡಲು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ. ಸಂಸ್ಥೆಗಳು ಸದರಿ ಕಾರ್ಯಕ್ಕೆ ತಗಲುವ ವೆಚ್ಚಕ್ಕೆ ಜಿ.ಎಸ್.ಟಿ ಮತ್ತು ಎಲ್ಲಾ ತೆರಿಗೆಗಳು ಸೇರಿ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ: 18.08.2023 ರಂದು ಸಂಜೆ 4 ಗಂಟೆಯೊಳಗೆ, ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯು.ಎ.ಎ.ಸಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03 ಈ ವಿಳಾಸಕ್ಕೆ ಮುದ್ದಾಂ/ಅಂಚೆ ಮೂಲಕ ತಲುಪಿಸಲು ತಿಳಿಸಿದೆ.

| ಕ್ರ ಸಂ | ಐಟಂಗಳ ವಿವರ | ದರ ರೂಪಾಯಿಗಳಲ್ಲಿ (ಒಬ್ಬ ವ್ಯಕ್ತಿಗೆ ತಗಲುವ ವೆಚ್ಚ ಎಲ್ಲಾ ತೆರಿಗೆಗಳು ಸೇರಿ) |
|---|---|---|
| 1 | ಮದ್ಯಾಹ್ನ ಲಘು ಉಪಹಾರ<br>1. ಚಪಾತಿ/ ಪೂರಿ- (02)<br>2. ಚಟ್ನಿ, ಸಾಗು/ಪಲ್ಯ<br>3. ಅನ್ನ, ಸಾಂಬಾರ್ ಮತ್ತು ರಸಂ<br>4. ಒಂದು ಸಿಹಿ (ಜಿಲೇಬಿ, ಡ್ರೈ ಜಾಮೂನ್, ಇತರೆ)<br>5. ಹಪ್ಪಳ ಮತ್ತು ಉಪ್ಪಿನಕಾಯಿ<br>6. ಮಜ್ಜಿಗೆ ಮತ್ತು ಮೊಸರು | |
| 2 | ಕಾಫಿ/ಟೀ | |

**ಷರತ್ತುಗಳು:**

1. ಉತ್ತಮ ಗುಣಮಟ್ಟದ ಶುಚಿ ಮತ್ತು ರುಚಿಕರವಾದ ಊಟ ತಿಂಡಿಗಳನ್ನು ನೀಡತಕ್ಕದ್ದು. ಆಹಾರದಲ್ಲಿ ಅಡುಗೆ ಸೋಡವನ್ನು ಉಪಯೋಗಿಸತಕ್ಕದಲ್ಲ.
2. ಊಟ ಮತ್ತು ಕುಡಿಯುವ ನೀರಿಗೆ ಸಂಬಂಧಿಸಿದಂತೆ ಅಗತ್ಯವಿರುವ ತಟ್ಟೆಗಳು, ಪ್ಲೇಟ್‌ಗಳು, ಲೋಟಗಳು ಇತ್ಯಾದಿಗಳನ್ನು ಒದಗಿಸಬೇಕು.
3. ಊಟ/ಉಪಹಾರ ವಿತರಿಸುವಾಗ ವಿತರಣೆಗೆ ಅನುಕೂಲವಾಗುವಂತೆ ಆಹಾರ ಪದಾರ್ಥಗಳನ್ನು ಟೇಬಲ್‌ಗಳ ಮೇಲೆ ಅಚ್ಚುಕಟ್ಟಾಗಿ ಜೋಡಿಸಿಡುವುದು ಹಾಜರಾಗುವ ವ್ಯಕ್ತಿಗಳಿಗೆ ಅನುಗುಣವಾಗಿ ಅಗತ್ಯ ಕೌಂಟರ್‌ಗಳನ್ನು ಮಾಡಿ ವಿತರಿಸುವುದು.
4. ಶುದ್ಧಕುಡಿಯುವ ನೀರನ್ನು ಒದಗಿಸುವುದು.
5. ಕಾರ್ಯಾಗಾರದಲ್ಲಿ ಭಾಗವಹಿಸುವ ಹಿರಿಯ ಅಧಿಕಾರಿ ಮತ್ತು ನೌಕರರೊಂದಿಗೆ ಸೌಹಾರ್ದಯುತವಾಗಿ ವರ್ತಿಸತಕ್ಕದ್ದು. ಯಾವುದೇ ಜಗಳ ವಾಗ್ವಾದ ಭಿನ್ನಾಭಿಪ್ರಾಯಗಳು ಉದ್ಭವಿಸದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಣೆ ಮಾಡತಕ್ಕದ್ದು.

6. ಸಂಸ್ಥೆಗಳು ಈ ಕಾರ್ಯಕ್ಕೆ ಸೂಚಿಸುವ ದರಪಟ್ಟಿಗಳನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯು.ಎ.ಎ.ಸಿ ರವರದ್ದಾಗಿರುತ್ತದೆ.
7. ದರಪಟ್ಟಿ ಲಕೋಟೆಯ ಮೇಲೆ ಕಡ್ಡಾಯವಾಗಿ "ಲಘು ಉಪಹಾರ ಮತ್ತು ಕಾಫಿ/ಟೀ ಸರಬರಾಜು" ಗಾಗಿ ದರಪಟ್ಟಿ ಎಂದು ನಮೂದಿಸುವುದು.
8. ಕಾರ್ಯಾದೇಶದಲ್ಲಿ ಸೂಚಿಸಲಾಗಿರುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಬಿಲ್ಲಿನ ಮೊತ್ತದಲ್ಲಿ 2% ಟಿ.ಡಿ.ಎಸ್ ಅನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು. ಹಾಗೂ ಸಂಸ್ಥೆಯು ನಿಯಮಾನುಸಾರ ನೊಂದಣಿಯಾಗಿದ್ದು, ಜಿ.ಎಸ್.ಟಿ ಸಂಖ್ಯೆ ಹೊಂದಿರಬೇಕು. (ಪ್ರತಿ ಸಲ್ಲಿಸುವುದು)
9. ಈ ಸಂಬಂಧ ಯಾವುದೇ ಸಾಗಾಣಿಕೆ ವೆಚ್ಚವನ್ನು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ ವತಿಯಿಂದ ಪಾವತಿಸಲಾಗುವುದಿಲ್ಲ ಹಾಗೂ ನಮೂದಿಸಿರುವ ದರ ಎಲ್ಲಾ ತೆರಿಗೆಗಳನ್ನು ಒಳಗೊಂಡಿರಬೇಕು.

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ

ಪ್ರತಿಯನ್ನು
1. ಕಛೇರಿಯ ಸೂಚನಾ ಫಲಕಕ್ಕೆ
2. ಕಛೇರಿ ಪ್ರತಿ